7	ಅಂಗನವಾಡಿ ಸಹಾಯಕಿಯರು	ರೂ.750	ರೂ.500	ರೂ.1250
8	ಮಿನಿ ಅಂಗನವಾಡಿ ಕಾರ್ಯಕರ್ತೆಯರು	ರೂ.750	ರೂ.500	ರೂ.1250

ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಶಿಕ್ಷಕರಿಗೆ ಆಗುತ್ತಿರುವ ಅನ್ಯಾಯಗಳು.

424 (737) ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಪಾಠ ಮಾಡಲು ಶಿಕ್ಷಕರನ್ನು ಯಾವ ರೀತಿ ನೇಮಕ ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು);

ಆ) ಈ ಶಿಕ್ಷಕರಿಗೆ ನಿಗಧಿಯಾಗಿರುವ ವೇತನ ಎಷ್ಟು; ಯಾವ ರೀತಿ ಸಂದಾಯ ಮಾಡಲಾಗುತ್ತಿದೆ; ನಿಗಧಿಪಡಿಸಿದೆಷ್ಟು; ಸಮರ್ಪಕ ರೀತಿಯಲ್ಲಿ ಹಣ ಶಿಕ್ಷಕರಿಗೆ ಪಾವತಿಯಾಗಿರುವುದೇ;

ಇ) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರಿಗೆ ಗುತ್ತಿಗೆ ಪಡೆದ ಸಂಸ್ಥೆಯಿಂದ ವಂಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಗುತ್ತಿಗೆ ಏಜೆನ್ಸಿ ಮೇಲೆ ಕೈಗೊಂಡಿರುವ ಕ್ರಮವೇನು;

ಉ) ಹೀಗೆ ರಾಜ್ಯದಾದ್ಯಂತ ಶಿಕ್ಷಕರು ಗುತ್ತಿಗೆದಾರರಿಂದ ವಂಚನೆಗೊಳಗಾಗುತ್ತಿದ್ದು, ಏಜೆನ್ಸಿ ಮುಖಾಂತರ ನೇಮಕಾತಿ ಮಾಡದೆ ನೇರವಾಗಿ ಕಂಟ್ರಾಕ್ಟ್ ಆಧಾರದ ಮೇಲೆ ಇಲಾಖೆಯಿಂದ ನೇಮಕ ಮಾಡುವುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಶಿಕ್ಷಕರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಶೇ 60 ಕ್ಕಿಂತ ಹೆಚ್ಚು ಅಂಕಗಳಿಸಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.

ಆ) ಮಾಹೆಯಾನ ರೂ.6000–00 ಗಳನ್ನು ಶಿಕ್ಷಕರಿಗೆ ವೇತನ ನಿಗಧಿ ಪಡಿಸಿದ್ದು, ಈ ವೇತನವನ್ನು ಜಿಲ್ಲಾ ಪಂಚಾಯತ್‌ನಿಂದ ಹೊರಗುತ್ತಿಗೆ

ಸಂಸ್ಥೆಗೆ ಬಿಡುಗಡೆ ಮಾಡಿ ಸದರಿ ಹೊರಗುತ್ತಿಗೆ ಸಂಸ್ಥೆಯಿಂದ ಸಮರ್ಪಕವಾಗಿ ಸಂದಾಯ ಮಾಡಲಾಗುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಗಾರ್ಮೆಂಟ್ ಕಾರ್ಮಿಕರ ಹಿತಾಸಕ್ತಿ ಕಾಪಾಡುವುದು

425 (733) ಶ್ರೀ ಮುನಿರಾಜು ಎಸ್ (ದಾಸರಹಳ್ಳಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಮತ್ತು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವ ಗಾರ್ಮೆಂಟ್ ನೌಕರರ ಸಂಖ್ಯೆ ಎಷ್ಟು (ವಿವರ ನೀಡುವುದು);

ಆ) ಈ ಕಾರ್ಮಿಕರ ಹಿತ ಕಾಪಾಡಲು ಆರೋಗ್ಯ ಮತ್ತು ಉದ್ಯೋಗ ರಕ್ಷಣೆ ನೀಡಲು ಸರ್ಕಾರದ ನಿಲುವೇನು?

ಶ್ರೀ ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಬೆಂಗಳೂರಿನಲ್ಲಿ 776 ಕಾರ್ಖಾನೆಗಳು ಕಾರ್ಖಾನೆಗಳ ಕಾಯ್ದೆ 1948ರ ಅಡಿ ನೋಂದಾವಣೆಗೊಂಡಿರುತ್ತವೆ.

ನೊಂದಾಯಿತ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಈ ಕೆಳಕಂಡಂತಿದೆ;

1. ಪುರುಷರು – 84,593
2. ಮಹಿಳೆಯರು – 2,02,848

ಒಟ್ಟು – 2,87,441

ಆ) ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುವ ಬಹುತೇಕ ಕಾರ್ಮಿಕರು ಮಾಹೆಯಾನ ರೂ.10,000/– ಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದು, ಈ ಎಲ್ಲಾ ಕಾರ್ಮಿಕರು ಇ.ಎಸ್.ಐ ಯೋಜನೆಗೆ ಒಳಪಟ್ಟಿರುತ್ತಾರೆ. ಅವರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಆರೋಗ್ಯ ರಕ್ಷಣೆಯನ್ನು ಇ.ಎಸ್.ಐ ಒದಗಿಸುತ್ತಿದೆ. ಅಲ್ಲದೆ 500 ಜನ ಕಾರ್ಮಿಕರಿಗಿಂತ ಹೆಚ್ಚಿನ ಕಾರ್ಮಿಕರನ್ನು ನೇಮಿಸಿಕೊಂಡಿರುವ ಕಾರ್ಖಾನೆಗಳಲ್ಲಿ ಕಾರ್ಖಾನೆಗಳ